


ಅಪ್ಪ: ಮಗನೇ, ನಿನ್ನನ್ನು ದತ್ತು ತೆಗೆದುಕೊಳ್ಳಲಾಗಿದೆ.
ಗುಂಡ: ಅದೇ ಮತ್ತೆ... ನೀವು ನನ್ನನ್ನು ನೋಡಿಕೊಳ್ಳುವ ರೀತಿಯಿಂದ ನನಗೆ ಮೊದಲೇ ಸಂಶಯವಿತ್ತು. ಸರಿ, ನನಗೂ ನನ್ನ ನಿಜವಾದ ಅಪ್ಪ ಅಮ್ಮನನ್ನು ನೋಡುವ ಕಾತುರತೆವಿದೆ.
ಅಪ್ಪ: ಅಯೋಗ್ಯ, ನಾವೇ ನಿನ್ನ ನಿಜವಾದ ಹೆತ್ತವರು ಕಣೋ. ಹೊಸ ಅಪ್ಪ ಅಮ್ಮ ಇನ್ನರ್ಧ ಗಂಟೆಯಲ್ಲಿ ಆಗಮಿಸುತ್ತಾರೆ. ನೀನು ಪ್ಯಾಕಿಂಗ್ ಮಾಡಿ ಹೊರಡಲು ತಯಾರಾಗಿ ಬಿಡು !

ಬಾಸ್: ನನ್ನ ಪರ್ಸ್ ಕಳೆದು ಹೋಗಿದೆ. ಅದರೊಳಗೆ ₹ 5,000 ಇತ್ತು. ಅದನ್ನು ತಂದುಕೊಟ್ಟವರಿಗೆ ₹ 1,000 ಬಹುಮಾನ ನೀಡುವೆ.
ಗುಂಡ: ಅದೇ ಪರ್ಸ್ ಅನ್ನು ನನಗೆ ತಂದು ತಂದುಕೊಟ್ಟವರಿಗೆ ₹ 2,000 ಬಹುಮಾನ ನೀಡುವೆ !

ಗುಂಡ: ಈ ವಾಟ್ಸ್ಆ್ಯಪ್ ಮತ್ತು ಫೇಸ್‌ಬುಕ್‌ನಂತಹ ಸಾಮಾಜಿಕ ಜಾಲತಾಣಗಳು ಮಾನವನನ್ನು ತುಂಬಾ ಮುಂದಕ್ಕೆ ತಂದು ನಿಲ್ಲಿಸುತ್ತವೆ.
ಪುಂಡ: ಅದು ಹೇಗೆ ?
ಗುಂಡ: ಉದಾಹರಣೆಗೆ ನನ್ನನ್ನೇ ತೆಗೆದುಕೊಳ್ಳಿ. ನಾನು ಎರಡು ಸ್ಟೇಷನ್ ಮೊದಲೇ ಇಳಿಯಬೇಕಿತ್ತು !

ಪುಂಡ: ಸ್ವರ್ಗ ಮತ್ತು ನರಕ ಎರಡೂ ಈ ಪ್ರಪಂಚದಲ್ಲೇ ಇದೆ ಎಂದು ಬಲ್ಲವರು ಹೇಳುತ್ತಾರಲ್ಲಾ, ಅವೆರಡಕ್ಕಿರುವ ವ್ಯತ್ಯಾಸವೇನು ಕಣೋ?
ಗುಂಡ: ಅಮೆರಿಕದ ಸಂಬಳ, ಬ್ರಿಟನ್ನಿನ ಮನೆ, ಚೀನಾದ ಆಹಾರ ಮತ್ತು ಭಾರತೀಯ ಪತ್ನಿ ಇದ್ದರೆ ಭೂಲೋಕದಲ್ಲೇ ಬಾಳು ಸ್ವರ್ಗ. ಅಮೆರಿಕನ್ ಪತ್ನಿ, ಬ್ರಿಟನ್ನಿನ ಆಹಾರ, ಚೀನಾದ ಮನೆ ಮತ್ತು ಭಾರತದ ಸಂಬಳ ಇದ್ದರೆ ಭೂಲೋಕದಲ್ಲೇ ನರಕ ಕಾಣಬಹುದು ಮಾರಾಯ !

ಟ್ರಾಫಿಕ್ ಪೊಲೀಸ್: ಏಯ್, ಏಕೆ ಕೆಂಪು ಸಿಗ್ನಲ್ ಕಾಣಿಸಲಿಲ್ಲವೇ ?
ಗುಂಡ: ಸಿಗ್ನಲ್ ಏನೋ ಕಾಣಿಸ್ತು. ಆದರೆ, ನೀವು ಕಾಣಿಸಿರಲಿಲ್ಲ !

(ಸಂಗ್ರಹ) **ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

